INCONVENIENCE CAUSED TO B. T. S. COMMUTERS

219. SRI T. R. SHAMANNA (Fort).- Will the Minister for Transport and Housing be pleased to state :

(a) whether the Government is aware of the inconvenience and hardship caused to B. T. S. commuters of Bangalore City due to less number of buses put into service ;

(b) if so the steps taken to put into service more Vehicles during peak hours to relieve the traffic congestion and inconvenience to the travelling public ?

SRI K. H. RANGANATH (Minister for Transport and Housing).—

(a) The Government is aware that the Transport arrangements in Bangalore need further improvement.

(b) Steps to relieve the traffic congestion during peak hours to the extant possible have been taken by operating additional trips during peak hours and increasing the number of trips by reducing the terminal lay over time.

ಶ್ರೀ ಟಿ. ಆರ್. ಶ್ಯಾಮಣ್ಣ.—ಬಡವರ ಕಷ್ಟವನ್ನು ಅರಿತಿರತಕ್ಕಂಥ ಶ್ರೀಮಾನ್ ರಂಗನಾಥ್‌ರವರು ಆಡಳಿತವನ್ನು ವಹಿಸಿಕೊಂಡ ನಂತರ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ, ಹೆಚ್ಚು ಸಹಾಯಕವಾಗುತ್ತದೆಯು ಭಾವಿಸಿದ್ದೆವು. ಈಗ ಸರ್ಕಾರದವರೇ ನಡೆಸುತ್ತಾ ಇರತಕ್ಕಂಥ ಬಿ. ಟಿ. ಎಸ್. ಸರ್ವೀಸ್ ಏನು ಇದೆಯೋ. ಅದರಿಂದ ಇವತ್ತು ಬಸ್‌ಗಳಲ್ಲಿ ಒಬ್ಬರ ಮೇಲೆ ಒಬ್ಬರು ಸವಾರಿ ಮಾಡಿಕೊಂಡು ಪ್ರಯಾಣ ಮಾಡುವುದು ತಪ್ಪಿಲ್ಲ ಮತ್ತು ಫುಟ್‌ಬೋರ್ಡ್‌ಗಳ ಮೇಲೆ ನಿಂತು ಪ್ರಯಾಣ ಮಾಡುವುದು ತಪ್ಪಿಲ್ಲ. ಇವತ್ತು ಆಟೋರಿಕ್ಷಾ ಟ್ಯಾಕ್ಸಿಗಳಲ್ಲಿ ಓಡಾಡತಕ್ಕಂಥದ್ದು ಕಷ್ಟವಾಗಿರತಕ್ಕಂಥ ಕಾಲದಲ್ಲಿ ಜನಸಾಮಾನ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರ ಶೀಘ್ರವಾದಂಥ ವ್ಯವಸ್ಥೆಯ ಇದರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆಯೇ ?

† ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರತಕ್ಕಂಥ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲತೆಯನ್ನು ಒದಗಿಸಬೇಕು ಎನ್ನುವುದೇ ಸರ್ಕಾರದ ಉದ್ದೇಶ. ಇನ್ನು ಈ ಸಾರಿಗೆ ವ್ಯವಸ್ಥೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮ ಪಡಿಸಬೇಕು ಎನ್ನುವ ಬಗ್ಗೆ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕೆಲವು ಅಂಕಿ ಸಂಖ್ಯೆಗಳನ್ನು ತಮ್ಮ ಗಮನಕ್ಕೆ, ತರಬಯಸುತ್ತೇನೆ ೧೯೭೩ ಅಕ್ಟೋಬರ್‌ನಲ್ಲಿ ೩ ಲಕ್ಷದ ೪೫ ಸಾವಿರ ಜನರು ಬಿ. ಟಿ. ಎಸ್. ನಲ್ಲಿ ಪ್ರಯಾಣ ಮಾಡುತ್ತಿದ್ದರೆ ಈಗ ೪ ಲಕ್ಷದ ೭೦ ಸಾವಿರ ಪ್ರಯಾಣಿಕರು ಪ್ರಯಾಣಮಾಡುತ್ತಿದ್ದಾರೆ. ಸುಮಾರು ೧ ಲಕ್ಷದಷ್ಟು ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದೆ. ಮತೆ ಅಕ್ಟೋಬರ್‌ನಲ್ಲಿ ೩೫೫ ಷೆಡ್ಯೂಲ್‌ಗಳನ್ನು ನಡೆಸುತ್ತಿದ್ದೆವು ಈಗ ೩೮೪ ಷೆಡ್ಯೂಲ್‌ಗಳನ್ನು ನಡೆಸುತ್ತಿದ್ದೇವೆ ಸುಮಾರು ೬೦ ಷಡ್ಯೂಲ್‌ಗಳನ್ನು ಪೀಕ್ ಅವರ್ಸ್‌ನಲ್ಲಿ ನಡೆಸುತ್ತಿದ್ದೇವೆ. ಇದನ್ನು ಉತ್ತಮ ಪಡಿಸುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಈಗ ಎಷ್ಟು, ಬಸ್‌ಗಳನ್ನು ಹಾಕಬೇಕೋ ಅಷ್ಟು ಬಸ್ಸುಗಳನ್ನು ಓಡಿಸುವಂಥ ಶಕ್ತಿ ಸರ್ಕಾರಕ್ಕೆ ಇಲ್ಲ, ಸರ್ಕಾರ ಪೀಕ್ ಅವರ್ಸ್‌ನಲ್ಲಿ ಮಾತ್ರ ಸಾಧ್ಯವಾದಷ್ಟು ಬೆಂಗಳೂರು ನಗರದಲ್ಲಿ ಎಷ್ಟು ಅನುಕೂಲಗಳನ್ನು ಒದಗಿಸಬೇಕೋ ಅಷ್ಟು ಅನುಕೂಲಗಳನ್ನು ಒದಗಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಇನ್ನೊಂದು ಮಾತನ್ನು ಹೇಳುವುದಾದರೆ ಡಿಸೆಂಬರ್ ಹೊತ್ತಿಗೆ ಇನ್ನು ೧೫೨೦ ಹೆಚ್ಚಿನ ಬಸ್‌ಗಳನ್ನು ಹಾಕುವ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ನಾನು ಈಗ ಕೆಲವು ದಿವಸಗಳ ಹಿಂದೆ ಬೊಂಬಾಯಿಗೆ ಹೋಗಿದ್ದೆ ಹಾಗೂ ಮದ್ರಾಸ್ಸಿಗೂ ಪದೇ ಪದೇ ಹೋಗುತ್ತಿರುತ್ತೇನೆ. ಮದ್ರಾಸ್ಸಿನಲ್ಲಿ ಬೆಂಗಳೂರಿನ ಜನಸಂಖ್ಯೆಗಿಂತ ಜಾಸ್ತಿಯಾಗಿದ್ದರೂ, ಇಲ್ಲಿಯ ಬಸ್ ಸೌಕರ್ಯಕ್ಕಿಂತ ಅಲ್ಲಿನ ಬಸ್‌ಗಳ ಸೌಕರ್ಯ ಉತ್ತಮವಾಗಿರುತ್ತದೆ.

(ಶ್ರೀ ಟಿ. ಆರ್. ಶಾಮಣ್ಣ)

ಅಲ್ಲಿ ಅಷ್ಟು ಚೆನ್ನಾಗಿ ಬಸ್‌ಗಳ ವ್ಯವಸ್ಥೆ ಮಾಡಿರುವಾಗ ಇಲ್ಲಿಯ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಇದರಲ್ಲಿ ಏನು ತೊಂದರೆ ಇದೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ನಮ್ಮಲ್ಲಿ ಬಸ್‌ಗಳ ವ್ಯವಸ್ಥೆ ಉತ್ತಮವಾಗಿದೆ ಎನ್ನುವ ಮಾತನ್ನು ನಾನು ಹೇಳಲಿಲ್ಲ. ಉತ್ತಮವಾಗಿ ನಡೆಸಬೇಕು ಎಂದು ಸರ್ಕಾರದ ಉದ್ದೇಶವಿದೆ. ಬಸ್‌ನ ವ್ಯವಸ್ಥೆಯನ್ನು ಉತ್ತಮಪಡಿಸಲು ಏನೇನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ವಿಚಾರ ಮಾಡುತ್ತಿದ್ದಾರೆ. ಆದಕ್ಕಾಗಿ ಹೇಳುತ್ತಿದ್ದೇನೆ ಡಿಸೆಂಬರ್ ಹೊತ್ತಿಗೆ ಇನ್ನು ೧೫-೨೦ ರೋಡ್ ಟ್ರೇಲರ್ ಬಸ್‌ಗಳನ್ನು ಹಾಕುವ ವ್ಯವಸ್ಥೆ ಮಾಡುತ್ತಿದ್ದೇವೆಂದು.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ ಈ ಬಸ್‌ಗಳು ಪ್ರಾರಂಭದಲ್ಲಿ ಸರಿಯಾದ ವೇಳೆಗೆ ಹೊರಟು, ಲಾಸ್ಟ್ ಸ್ಟಾಪ್‌ನಲ್ಲಿ ೧೫, ೨೦ ನಿಮಿಷಗಳ ಕಾಲ ಸುಮ್ಮನೇ ನಿಂತಿರುತ್ತವೆ. ಆದುದರಿಂದ ಆ ಸಮಯದಲ್ಲೂ ಬಸ್‌ಗಳನ್ನು ಓಡಿಸುವುದರಿಂದ ಜನಗಳಿಗೆ ಹೆಚ್ಚಿನ ಸೌಕರ್ಯ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ?

ಶ್ರೀ ಕೆ. ಎಚ್. ರಂಗನಾಥ್ —ಈಗಾಗಲೇ "ಲೇ ಓವರ್ ಪೀರಿಯಡ್‌ನ್ನು ರೆಡ್ಯೂಸ್" ಮಾಡಿದ್ದೇವೆ. ಏನೇನು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಎಂ. ವಿ. ರಾಮಸ್ವಾಮಿ.—ತಾವು ಹೊಸದಾಗಿ ಈ ಮಂತ್ರಿಪದವಿಯನ್ನು ವಹಿಸಿಕೊಂಡಾಗ ಅಬ್ರುಪ್ಟ್ ಆಗಿ ಕೆ. ಎಸ್. ಆರ್. ಟಿ. ಸಿಗೆ ಇನ್ಸ್‌ಪೆಕ್ಷನ್ ಮಾಡಿ ಯಾವರೀತಿ ಇಂಪ್ರೂವ್ ಮಾಡಿದಿರೋ ಅದೇ ರೀತಿಯಲ್ಲಿ ಪೀಕ್ ಅವರ್ಸ್‌ನಲ್ಲಿಯೂ ತಾವು ಅಬ್ರುಪ್ಟ್ ಆಗಿ ಇನ್ಸ್‌ಪೆಕ್ಷನ್ ಮಾಡಿದರೆ ಪ್ಯಾಸೆಂಜರ್ಸ್‌ಗೆ ಅನುಕೂಲವಾಗುವುದಿಲ್ಲವೇ ? ಹಾಗೂ ನೌಕರರು ಹತೋಟಿಯಲ್ಲಿ ಬರುವುದಿಲ್ಲವೇ ?

ಶ್ರೀ ಕೆ. ಎಚ್. ರಂಗನಾಥ್ —ನಾವು ಅಬ್ರುಪ್ಟ್ ಆಗಿ ಹೋದ ತಕ್ಷಣ ಇಂಪ್ರೂವ್ ಆಗುತ್ತದೆ ಎನ್ನುವುದು ಸರಿಯಲ್ಲ, ಹಾಗೂ ನೌಕರರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಇಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಇವತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಪೆಟ್ರೋಲ್ ಬೆಲೆ ವಗೈರೆ ಎಲ್ಲಾ ಜಾಸ್ತಿ ಆಗಿರುವುದರಿಂದ, ಕಾರ್. ಟ್ಯಾಕ್ಸಿನಲ್ಲಿ ಓಡಾಡುತ್ತಿದ್ದವರೆಲ್ಲಾ ಇವತ್ತು ಬಸ್‌ಗಳಲ್ಲಿಯೇ ಓಡಾಡುತಿದ್ದಾರೆ. ಇದರಿಂದಲೂ ಬಸ್ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ತಾವು ಹೇಳಿದ ಹಾಗೆ ಇನ್ನು ೧೫-೨೦ ರಸ್ತೆ ರೈಲುಗಳನ್ನು ಹಾಕಿದರೂ ಕೂಡ ಜನಗಳಿಗೆ ಸಾಕಷ್ಟು ಸೌಕರ್ಯ ಸಿಗದೇ ಹೋದ ಪಕ್ಷದಲ್ಲಿ, ಮತ್ತು ಮುಂದಿನ ವರ್ಷ ಜನವರಿ ತಿಂಗಳಲ್ಲಿ ಪೀಕ್ ಅವರ್ಸ್‌ನಲ್ಲಿ ಹೆಚ್ಚಿನ ಬಸ್‌ಗಳನ್ನು ಹಾಕುವುದಕ್ಕೆ ಆಗದೇ ಹೋದರೆ, ಖಾಸಗಿ ಬಸ್‌ನವರು ಪೀಕ್ ಅವರ್ಸ್‌ನಲ್ಲಿ ಮಾತ್ರ ಬಸ್‌ಗಳನ್ನು ಓಡಿಸುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಖಾಸಗಿ ಬಸ್‌ನವರಿಗೆ ಅವಕಾಶ ಮಾಡಿಕೊಡತಕ್ಕಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ ಪ್ರಯಾಣಿಕರಿಗೆ ಸಾಧ್ಯವಾದಷ್ಟು ಅನುಕೂಲತೆಯನ್ನು ಒದಗಿಸಲು ಸರ್ಕಾರದವರು ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಕಷ್ಟವಾಗಿದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಇವತ್ತಿನ ದಿವಸ ಬಸ್‌ಗಳಲ್ಲಿ ಡಬ್ಬಲ್ ಲೋಡ್ ಇದ್ದರೂ ಕೂಡ ಬಿ. ಟಿ. ಎಸ್. ಗೆ ನಷ್ಟವಾಗುತ್ತಿದೆ ಎಂದರೆ, ಆ ರೀತಿ ನಷ್ಟವಾಗುತ್ತಿರುವುದನ್ನು ತಪ್ಪಿಸುವುದಕ್ಕೆ ಏನಾದರೂ ತೀವ್ರವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಬಿ. ಟಿ. ಎಸ್. ಗೆ ಆಗತಕ್ಕಂಥ ನಷ್ಟವನ್ನು ತಪ್ಪಿಸತಕ್ಕಂಥದ್ದು ಬಹಳ ಕಷ್ಟದ ಕೆಲಸ. ಎಲ್ಲಾ ನಗರಗಳಲ್ಲೂ ಓಡಾಡತಕ್ಕಂಥ ನಗರ ಸಾರಿಗೆ ಬಸ್‌ಗಳೂ ಸಹ ಸ್ವಲ್ಪ ನಷ್ಟದಲ್ಲಿಯೇ ನಡೆಯತಕ್ಕಂಥದ್ದು. ನಾವು ಆದಷ್ಟು ನಷ್ಟವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಪಡಬೇಕೇ ಹೊರತು, ನೂರಕ್ಕೆ ನೂರು ಪಾಲು ನಷ್ಟವನ್ನು ತಪ್ಪಿಸುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಎಲ್ಲಾ ಕಡೆಯೂ ನಷ್ಟವಾಗುತ್ತಿರುವ ಹಾಗೆ ನಮ್ಮಲ್ಲಿಯೂ ನಷ್ಟವಾಗುತ್ತಿದೆ ಎಂದು ಸಭೆಯ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

9-30 a.m.

ಅಧ್ಯಕ್ಷರು — ಮಾನ್ಯ ವ್ಯವಸಾಯ ಮಂತ್ರಿಗಳು ಈಗ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

STATEMENT BY THE MINISTER FOR AGRICULTURE AND ANIMAL HUSBANDRY

Re: Supply of fertilisers.

SRI N. CHIKKE GOWDA (Minister for Agriculture and Animal Husbandry).—

During the meeting on Agriculture Production which was presided over by the Prime Minister, stress was laid on the need to increase the area under high-yielding varieties, considerably. Fertilizer is an essential input for all high-yielding varieties. Government have been considering for quite some time the need to supply adequate quantities of fertilizers for high yielding varieties of crops so that the area under high-yielding varieties goes up from year to year. Government have also been giving some thought to the need for increased production of food grains during the current year. It is also desirable that certain commercial crops like oil seeds, sugar and cotton should receive the same encouragement in view of the extreme scarcity of fibre, sugar and cooking oil

Considering all these factors and the need to step up the production of these crops, Government have now decided that all high-yielding varieties of crops should receive the full doses of fertilizers as recommended by the State Department of Agriculture. I am happy to state that a Government order incorporating all these decisions is being issued to-day. All these increased dosage are in enhancement of the dosage whichwere notified on 7th August by GO No. AF 70 AFT 72. This GO of 7th August had enhanced considerably the dosage which were notified during the last season and now I am pleased to say that Government have decided to give full doses for all high-yielding and hybrid crops enhanced doses to more crops. Such commercial crops and export oriented crops which deserve all encouragement have been also included. These are Mulberry, Sunflower, Potatoes, Sweet-potatoes, and tapioca. I have included sweet potatoes and tapioca as a measure of increasing the available production of all tuber crops. Since vegetables play an important part in our diet; vegetables will also receive the full doses of fertilizers as recommended by the State Department of Horticulture.